# ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ

ಜ್ಞಾನ ಸಾಗರ ಆವರಣ, ವಿನಾಯಕ ನಗರ, ಕಂಟೋನ್ಮೆಂಟ್, ಬಳ್ಳಾರಿ–583105.

ಕಾಲೇಜು ಅಭಿವೃದ್ಧಿ ಮಂಡಳಿ ಫೋ.ನಂ:08392–242093


ಸಂಖ್ಯೆ:ವಿ.ಶ್ರೀ.ಕೃ.ವಿ.ವಿ.ಬ/ಕಾ.ಅ.ಮಂ/2018–19/217 ದಿನಾಂಕ:13.11.2018

## :ಸಂಯೋಜನಾ ಪ್ರಕಟಣೆ:

**ವಿಷಯ:** 2019–20ನೇ ಶೈಕ್ಷಣಿಕ ಸಾಲಿಗೆ ಸಂಯೋಜನಾ ಅರ್ಜಿಗಳನ್ನು ಆಹ್ವಾನಿಸುವ ಕುರಿತು.

***********

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಉಪಪ್ರಕರಣದ 59(3)ರಂತೆ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದಲ್ಲಿನ ಸಂಯೋಜನೆಗೊಳಪಟ್ಟಿರುವ (ಬಳ್ಳಾರಿ ಮತ್ತು ಕೊಪ್ಪಳ) ಜಿಲ್ಲೆಗಳ ಎಲ್ಲಾ ಮಹಾವಿದ್ಯಾಲಯಗಳಿಂದ 2019–20ನೇ ಶೈಕ್ಷಣಿಕ ವರ್ಷಕ್ಕೆ ಸ್ನಾತಕ,ಸ್ನಾತಕೋತ್ತರ, ಶಿಕ್ಷಣ, ಇತರೆ ಮಹಾವಿದ್ಯಾಲಯಗಳಿಂದ ಶಾಶ್ವತ/ಮುಂದುವರಿಕೆ/ವಿಸ್ತರಣೆಗಾಗಿ/ಹೊಸ ಕೋರ್ಸ್ ಮತ್ತು ನೋಂದಾಯಿತ ಸಾರ್ವಜನಿಕ ಸಂಘ/ಟ್ರಸ್ಟ್/ಸಂಸ್ಥೆಗಳಿಂದ ಹೊಸ ಪದವಿ ಮಹಾವಿದ್ಯಾಲಯಗಳನ್ನು ಪ್ರಾರಂಭಿಸಲು ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಗಳ ವ್ಯಾಪ್ತಿಯಲ್ಲಿ ಸಂಯೋಜನಾ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಸಂಯೋಜನಾ ಶುಲ್ಕ ವಿವರ ಮತ್ತು ಇತರೆ ಮಾಹಿತಿಗಳನ್ನು ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ವೆಬ್‌ಸೈಟ್ www.vskub.ac.in ನಲ್ಲಿ ಲಭ್ಯವಿದ್ದು ಅರ್ಜಿಗಳನ್ನು ಡೌನ್‌ಲೋಡ್ ಮಾಡಿಕೊಂಡು ಭರ್ತಿಮಾಡಿ ಇ–ಮೇಲ್ ಮುಖಾಂತರ directorcdcvskub@gmail.com ಗೆ ಕಳುಹಿಸುವುದರ ಜೊತೆಗೆ ಅವುಗಳ ಮುದ್ರಿತ ಎರಡು(02) ಪ್ರತಿಗಳನ್ನು ಸಂಬಂಧಿಸಿದ ಲಗತ್ತುಗಳೊಂದಿಗೆ ಬೈಂಡ್ ಮಾಡಿ ದ್ವಿ–(02)ಪ್ರತಿಯಲ್ಲಿ ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ ವಿಭಾಗ, ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ, ಜ್ಞಾನ ಸಾಗರ ಆವರಣ, ವಿನಾಯಕ ನಗರ, ಕಂಟೋನ್ಮೆಂಟ್, ಬಳ್ಳಾರಿ–583105, ಇವರಿಗೆ ಈ ಕೆಳಗೆ ಸೂಚಿಸಿರುವ ದಿನಾಂಕದೊಳಗೆ ಸಲ್ಲಿಸಲು ತಿಳಿಸಲಾಗಿದೆ.

| | | |
|---|---|---|
| 1. | ದಂಡ ರಹಿತ ಕೊನೆಯ ದಿನಾಂಕ | 14.11.2018 ರಿಂದ 03.12.2018 |
| 2. | ರೂ.20,000/–ದಂಡ ಶುಲ್ಕದೊಡನೆ | 04.12.2018 ರಿಂದ 10.12.2018 |
| 3. | ರೂ.40,000/–ದಂಡ ಶುಲ್ಕದೊಡನೆ | 11.12.2018 ರಿಂದ 20.12.2018 |

ದಿನಾಂಕ: 21.012.2018ರ ನಂತರ ಬಂದ ಸಂಯೋಜನಾ ಅರ್ಜಿಗಳನ್ನು ತಿರಸ್ಕರಿಸಲಾಗುವುದು ಹಾಗೂ ಯಾವುದೇ ಕಾರಣಕ್ಕೂ ಸಂಯೋಜನಾ ಅರ್ಜಿ ಸಲ್ಲಿಕೆಯ ದಿನಾಂಕವನ್ನು ವಿಸ್ತರಿಸಲು ಅವಕಾಶವಿರುವುದಿಲ್ಲ.

ವಿಶೇಷ ಸೂಚನೆ: www.aishe.nic.in ವೆಬ್‌ಸೈಟಿಗೆ 2018–19ನೇ ಸಾಲಿನ DCF-II ಅಪ್‌ಲೋಡ್ ಮಾಡಿದ ಮಹಾವಿದ್ಯಾಲಯಗಳ ಹಾಗೂ ನ್ಯಾಡ್ (NAD)ಕಡ್ಡಾಯವಾಗಿರುವುದರಿಂದ ಪ್ರತಿಯೊಂದು ಕಾಲೇಜುಗಳು ತಮ್ಮ ತಮ್ಮ ಕಾಲೇಜಿನ ಅಂತರ್‌ಜಾಲತಾಣಗಳನ್ನು (web site ) ಸಿದ್ಧಪಡಿಸಿ ಅವುಗಳ ವಿಳಾಸವನ್ನು ನೀಡಿದಾಗ ಮಾತ್ರ ಅಂತಹ ಸಂಯೋಜನಾ ಅರ್ಜಿಗಳನ್ನು ಪರಿಗಣಿಸಲಾಗುವುದು.

13/11/18

ಕುಲಸಚಿವರು
ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

ಪ್ರತಿಗಳು:

1. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ
2. ಕುಲಸಚಿವರು (ಮೌಲ್ಯಮಾಪನ), ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
3. ಹಣಕಾಸು ಅಧಿಕಾರಿಗಳು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
4. ಕಛೇರಿ ಪ್ರತಿ.

Scanned by CamScanner